# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಹಣವನ್ನು ಬ್ಯಾಂಕ್ ಅಥವಾ ಅಂಚೆ ಕಛೇರಿಯ ಉಳಿತಾಯ ಖಾತೆಯ ಮೂಲಕ ಫಲಾನುಭವಿಗಳಿಗೆ ವಿತರಿಸುವ ಬಗ್ಗೆ.

**ಓದಲಾಗಿದೆ:** ಗ್ರಾಮೀಣಾಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರದ ಪತ್ರ ಸಂಖ್ಯೆ: DO.No.J-11060/1/08-NSAP, dated:11/06/08.

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರವು ಸಾಮಾಜಿಕ ಭದ್ರತೆ ಯೋಜನೆಗಳಡಿಯಲ್ಲಿ ಅಶಕ್ತ ಹಾಗೂ ಅಸಹಾಯಕ ಜನಗಳಿಗೆ ಅಂದರೆ ವೃದ್ಧರು, ನಿರ್ಗತಿಕ ವಿಧವೆಯರು ಹಾಗೂ ಅಂಗವಿಕಲರಿಗೆ ಆರ್ಥಿಕ ನೆರವು ನೀಡುತ್ತಿದೆ. ಪ್ರಸ್ತುತ ಈ ಫಲಾನುಭವಿಗಳಿಗೆ ಪಿಂಚಣಿ ಹಣವನ್ನು ಅಂಚೆ ಕಛೇರಿಯ ಮನಿ ಆರ್ಡರ್ ಮೂಲಕ ವಿತರಿಸಲಾಗುತ್ತಿದೆ. ಸದರಿ ವ್ಯವಸ್ಥೆಯಲ್ಲಿ ಪಿಂಚಣಿ ಹಣವು ಫಲಾನುಭವಿಗಳಿಗೆ ತಲುಪುವಲ್ಲಿ ವಿಳಂಬವಾಗುತ್ತಿವೆ ಹಾಗೂ ಅಂಚೆ ಇಲಾಖೆಗೆ ಶೇಕಡಾ 5 ರಷ್ಟು ಕಮೀಷನ್ ಹಣವನ್ನು ಸಹ ನೀಡಬೇಕಿರುತ್ತದೆ. ಅಲ್ಲದೆ ಖಜಾನೆ ಇಲಾಖೆಯಲ್ಲಿ ಮನಿ ಆರ್ಡರ್ ಫಾರಂಗಳನ್ನು ಮುದ್ರಿಸಲು ಸಹ ಸಾಕಷ್ಟು ಹಣ ವೆಚ್ಚವಾಗುತ್ತಿದೆ.

ಮೇಲೆ ಓದಲಾದ ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಪತ್ರದಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಫಲಾನುಭವಿಗಳಿಗೆ ಪಿಂಚಣಿ ಹಣವನ್ನು ಬ್ಯಾಂಕ್ ಅಥವಾ ಅಂಚೆ ಕಛೇರಿಯ ಉಳಿತಾಯ ಖಾತೆಯ ಮೂಲಕ ವಿತರಿಸಲು ಸಲಹೆ ನೀಡಿರುತ್ತಾರೆ. ಈ ಪಿಂಚಣಿ ಹಣವನ್ನು ಅಂಚೆ ಕಛೇರಿ ಹಾಗೂ ಬ್ಯಾಂಕ್‌ಗಳ ಉಳಿತಾಯ ಖಾತೆಯ ಮೂಲಕ ವಿತರಿಸುವ ವ್ಯವಸ್ಥೆಯಿಂದ ಕೆಳಕಂಡ ಅನುಕೂಲಗಳಿರುತ್ತವೆ:-

ಅ. ಪಿಂಚಣಿ ಹಣವು ಅರ್ಹ ಫಲಾನುಭವಿಗಳಿಗೆ ತಲುಪುವುದು ನಿಶ್ಚಿತವಾಗುತ್ತದೆ.
ಆ. ಖಜಾನೆ ಇಲಾಖೆಯಲ್ಲಿ ಸಾಕಷ್ಟು ಸಮಯ ಹಾಗೂ ಹಣ ಉಳಿತಾಯವಾಗುತ್ತದೆ.
ಇ. ಫಲಾನುಭವಿಗಳು ಯಾವುದೇ ದಿನ ಹಣವನ್ನು ಸೆಳೆದುಕೊಳ್ಳಬಹುದಾದ್ದರಿಂದ, ಇದು ಹೆಚ್ಚು ಸುರಕ್ಷ.
ಈ. ಫಲಾನುಭವಿಗಳಲ್ಲಿ ಉಳಿತಾಯದ ಅಭ್ಯಾಸ ಬೆಳೆಯಲು ಸಹಕಾರಿಯಾಗುತ್ತದೆ.
ಉ. ಅಂಚೆ ಕಛೇರಿಗೆ ಸಂದಾಯ ಮಾಡುವ ಮನಿ ಆರ್ಡರ್ ಕಮಿಷನ್ ಸರ್ಕಾರಕ್ಕೆ ಉಳಿತಾಯವಾಗುತ್ತದೆ.
ಊ. ಫಲಾನುಭವಿಗಳ ಬಗೆಗಿನ ಮಾಹಿತಿಯು ನಿರ್ದಿಷ್ಟವಾಗಿ ಸಿಗುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ ಆರ್ಥಿಕ ಸೇರ್ಪಡೆ(Financial Inclusion) ಹಾಲಿ ಇರುವ ನೀತಿಯ ಪ್ರಕಾರ ಜೀರೋ ಬ್ಯಾಲೆನ್ಸ್(No Frill Accounts or Zero Balance Accounts))ಬ್ಯಾಂಕ್ ಖಾತೆಗಳನ್ನು ತೆರೆಯಬಹುದಾಗಿರುತ್ತದೆ. ಅಂಚೆ ಇಲಾಖೆಯು ಜೀರೋ ಬ್ಯಾಲೆನ್ಸ್ ಅಂಚೆ ಖಾತೆಯನ್ನು ತೆರೆಯಲು ಒಪ್ಪಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸರ್ಕಾರವು ಮನಗಂಡು ಸಾಮಾಜಿಕ ಭದ್ರತಾ ಯೋಜನೆಗಳಾದ ರಾಷ್ಟ್ರೀಯ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ನಿರ್ಗತಿಕ ವಿಧವಾ ವೇತನ ಹಾಗೂ ಅಂಗವಿಕಲರ ವೇತನವನ್ನು ಬ್ಯಾಂಕ್ ಅಥವಾ ಅಂಚೆ ಕಛೇರಿಯ ಉಳಿತಾಯ ಖಾತೆಯ ಮೂಲಕ ಫಲಾನುಭವಿಗಳಿಗೆ ವಿತರಿಸಲು ನಿರ್ಧರಿಸಿದೆ. ಮುಂದುವರೆದಂತೆ ಬ್ಯಾಂಕ್ ಅಥವಾ ಅಂಚೆ ಕಛೇರಿಯಲ್ಲಿ ಪಿಂಚಣಿ ಹಣವನ್ನು ಪಡೆಯಲಾಗದ ಅತಿ ವೃದ್ಧರು ಅಥವಾ ಅಂಗವಿಕಲರಿಗೆ ಹಾಗೂ ಯಾವ ಸ್ಥಳಗಳಲ್ಲಿ ಬ್ಯಾಂಕ್ ಅಥವಾ ಅಂಚೆ

67

ಕಛೇರಿಗಳು ಇರುವುದಿಲ್ಲವೋ ಅಂತಹ ಫಲಾನುಭವಿಗಳಿಗೆ ಅಂಚೆ ಕಛೇರಿಯ ಮನಿ ಆರ್ಡರ್ ಮೂಲಕ ಪಿಂಚಣಿ ಹಣವನ್ನು ವಿತರಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿದೆ ಕಾರಣ ಈ ಕೆಳಕಂಡ ಆದೇಶ

**ಸರ್ಕಾರಿ ಆದೇಶ ಸಂಖ್ಯೆ: ಕಂಇ 30 ಡಿಎಸ್‌ಪಿ 2008 (ಭಾಗ-1), ದಿನಾಂಕ:31-03-2009.**

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸಾಮಾಜಿಕ ಭದ್ರತಾ ಯೋಜನೆಗಳಾದ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ, ನಿರ್ಗತಿಕ ವಿಧವಾ ವೇತನ ಹಾಗೂ ಅಂಗವಿಕಲರ ವೇತನವನ್ನು ಮಂಜೂರು ಮಾಡಲಾದ ಫಲಾನುಭವಿಗಳಿಗೆ ಈ ಕೆಳಕಂಡಂತೆ ರಾಜ್ಯದಲ್ಲಿರುವ ಬ್ಯಾಂಕ್ ಅಥವಾ ಅಂಚೆ ಕಛೇರಿಗಳಲ್ಲಿ ಖಾತೆಯನ್ನು ತೆರೆದು ಈ ತಕ್ಷಣದಿಂದ ಜಾರಿಗೆ ಬರುವಂತೆ ವಿತರಿಸಲು ಅನುಮತಿ ನೀಡಿ ಆದೇಶಿಸಿದೆ.

1. ಬ್ಯಾಂಕ್ ಶಾಖೆಗಳು ಲಭ್ಯವಿರುವ ಸ್ಥಳಗಳಲ್ಲಿ ಫಲಾನುಭವಿಗಳ ಜೀರೋ ಬ್ಯಾಲೆನ್ಸ್ ಬ್ಯಾಂಕ್ ಉಳಿತಾಯ ಖಾತೆ ಮೂಲಕ ವಿತರಿಸಬೇಕು.
2. ಅಂಚೆ ಕಛೇರಿಗಳು ಲಭ್ಯವಿರುವ ಸ್ಥಳಗಳಲ್ಲಿ ಫಲಾನುಭವಿಗಳ ಜೀರೋ ಬ್ಯಾಲೆನ್ಸ್ ಅಂಚೆ ಕಛೇರಿಯ ಉಳಿತಾಯ ಖಾತೆ ಮೂಲಕ ವಿತರಿಸಬೇಕು.
3. ಬ್ಯಾಂಕ್ ಶಾಖೆಗಳು ಮತ್ತು ಅಂಚೆ ಕಛೇರಿಗಳು ಲಭ್ಯವಿರುವ ಸ್ಥಳಗಳಲ್ಲಿ ಫಲಾನುಭವಿಗಳ ಇಚ್ಛೆಯ ಪ್ರಕಾರ ಬ್ಯಾಂಕ್ ಅಥವಾ ಅಂಚೆ ಕಛೇರಿಯ ಜೀರೋ ಬ್ಯಾಲೆನ್ಸ್ ಉಳಿತಾಯ ಖಾತೆಯ ಮೂಲಕ ವಿತರಿಸಬೇಕು.
4. ಬ್ಯಾಂಕ್ ಅಥವಾ ಅಂಚೆ ಕಛೇರಿಯಲ್ಲಿ ಪಿಂಚಣಿ ಹಣವನ್ನು ಪಡೆಯಲಾಗದ ಅತಿ ವೃದ್ಧರು ಅಥವಾ ಅಂಗವಿಕಲರಿಗೆ ಹಾಗೂ ಯಾವ ಸ್ಥಳಗಳಲ್ಲಿ ಬ್ಯಾಂಕ್ ಅಥವಾ ಅಂಚೆ ಕಛೇರಿಗಳು ಲಭ್ಯವಿರುವುದಿಲ್ಲವೋ ಅಂತಹ ಫಲಾನುಭವಿಗಳಿಗೆ ಅಂಚೆ ಕಛೇರಿಯ ಮನಿ ಆರ್ಡರ್ ಮೂಲಕ ಪಿಂಚಣಿ ಹಣವನ್ನು ವಿತರಿಸಬೇಕು.

ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಯಾವ ಯಾವ ಸೌಲಭ್ಯಗಳ ಮುಖಾಂತರ ಹಣವನ್ನು ವಿತರಿಸಲಾಗುತ್ತಿದೆ ಎಂಬುದರ ಬಗ್ಗೆ ನಿಖರವಾದ ದಾಖಲೆ ಪುಸ್ತಕಗಳನ್ನು ಹಾಗು ಗಣಕೀಕೃತ ಮಾಹಿತಿಯನ್ನು ಆಯಾ ತಾಲ್ಲೂಕಿನ ತಹಸೀಲ್ದಾರರು ನಿರ್ವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆ.ಇ.360:361 ಹಾಗೂ 390, ವೆಚ್ಚ-7/08 ಆರ್ಥಿಕ ಇಲಾಖೆ(ವೆಚ್ಚ-7), ದಿನಾಂಕ: 13/11/2008 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಕಾತ್ಯಾಯಿನಿ ದೇವಿ) 31/3/09
ಪೀಠಾಧಿಕಾರಿಗಳು,
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ, ಕಂದಾಯ ಇಲಾಖೆ.

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.